**O.S. 115-15** **DW-1**

**ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 05.03.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 1 ಹಾಗೂ 2 ರ ಪ್ರತಿವಾದಿ ಪರ ಶ್ರೀ M V S, ವಕೀಲರಿಂದಃ**

17. ನಾನು ಆಸ್ತಿ ಖರೀದಿ ಮಾಡುವ ಪೂರ್ವದಲ್ಲಿ ವಕೀಲರಿಂದ ಕಾನೂನು ಅಭಿಪ್ರಾಯ ಪಡೆದ ಬಗ್ಗೆ ನೆನಪಿಲ್ಲ. ಮಲ್ಲನಗೌಡ ಗೆದ್ದನಗೌಡ ಪಾಟೀಲ ರವರು ಆಸ್ತಿ ದಾಖಲೆ ತಂದರು. ಅವರೊಬ್ಬರೆ ಬಂದಿದ್ದರು. ಖರೀದಿ ಮಾಡುವ ಎಷ್ಟು ದಿನಗಳ ಮುಂಚೆ ದಾಖಲೆ ನೋಡಿದ್ದೇನೆ ಎಂದು ನೆನಪಿಲ್ಲ. ನಿಖರವಾಗಿ ಹಾಗೂ ಅಂದಾಜು ಹೇಳಲು ಬರುವುದಿಲ್ಲ. ಮಾರಾಟಗಾರರ ಹೆಸರು ಹೇಳಲು ಬರುವುದಿಲ್ಲ. 2010-11 ರಲ್ಲಿ ಆಸ್ತಿ ಖರೀದಿ ಮಾಡಿದ್ದೇವೆ. 3 ಜನ ಖರೀದಿ ಮಾಡಿದ್ದೇವೆ. ಅವರ ಪೈಕಿ 1) ನಾನು 2) ಶಂಭು ಹಬೀಬ ಹಾಗೂ 3) ಭರತ ಮಹಾಜನ ಶೇಠ ರವರು. ನಾನು 30 ಗುಂಟೆ ಖರೀದಿ ಮಾಡಿದ್ದೇನೆ. 30 ಗುಂಟೆ ಖರೀದಿ ಮಾಡುವಾಗ ಆಸ್ತಿ ಭಾಗವಾಗಿರಲಿಲ್ಲ. ಭಾಗ ಆಗಿರದ ಬಗ್ಗೆ ನೋಡಬೇಕು. 2 ಎಕರೆಯಲ್ಲಿ 30 ಗುಂಟೆ ಖರೀದಿ ಮಾಡಿದ್ದೇನೆ. 30 ಗುಂಟೆ ಪೋಡಿ ಮಾಡಿಸಿದ ಬಗ್ಗೆ ಗೊತ್ತಿಲ್ಲ. ಪೋಡಿ ಮಾಡಲು ಅರ್ಜಿ ಕೊಟ್ಟ ಬಗ್ಗೆ ನೆನಪಿಲ್ಲ. ಆಸ್ತಿ ಖರೀದಿ ಮಾಡುವ ಮುಂಚೆ ಎಲ್ಲಿ ಬರುತ್ತದೆ ಎಂದು ನೋಡಿದ್ದೇನೆ. ಅಕ್ಕಪಕ್ಕದವರನ್ನು ಕೇಳಿಲ್ಲ. ನೋಂದಣಿ ಖರೀದಿ ಪತ್ರ ಆಗುವದಕ್ಕಿಂತ 15 – 20 ದಿನಗಳ ಮುಂಚೆ ನಮ್ಮ ಕಚೇರಿಯಲ್ಲಿ ಮಾತುಕತೆಯಾಗಿದೆ. ಆ ದಿವಸ 3 – 4 ಜನ ಬಂದಿದ್ದರು. 1) ಮಲ್ಲನಗೌಡ ಹಾಗೂ 2) ಶಿಬಾಯಿ ಉಳಿದವರ ಹೆಸರು ನೆನಪಿಲ್ಲ. ಮಾತುಕತೆ ಕಾಲಕ್ಕೆ ಆ 3 – 4 ಜನ ಎಲ್ಲರನ್ನು ಕರೆದುಕೊಂಡು ಬರುತ್ತೇವೆ ಅಂತಾ ಹೇಳಿದ್ದರು. ಎಷ್ಟಕ್ಕೆ ಮಾತುಕತೆಯಾಗಿದೆ ಅಂತಾ ಗೊತ್ತಿಲ್ಲ. ಅದರ ಕಿಮ್ಮತ್ತು ಹೇಳಲು ಬರುವುದಿಲ್ಲ. ದಾವಾ ಆಸ್ತಿ ರಾಯನಾಳ ಗ್ರಾಮದಲ್ಲಿದೆ. ಆ ಕಾಲಕ್ಕೆ ಒಂದು ಎಕರೆಗೆ 2 ಕೋಟಿ ಮೇಲೆ ಬೆಲೆ ಇತ್ತು ಅಂದರೆ ಸರಿಯಲ್ಲ. ಸಣ್ಣ ಮೊತ್ತಕ್ಕೆ ಆಸ್ತಿ ಹೊಡೆಯಲು ಖರೀದಿ ಮಾಡಿದ್ದೇವೆ ಅಂದರೆ ಸರಿಯಲ್ಲ. ಆಸ್ತಿಯನ್ನು ಪರಾಧೀನ ಮಾಡಬಾರದೆಂದು ನ್ಯಾಯಾಲಯದ ಆದೇಶ ದಾಖಲೆಯಲ್ಲಿ ನಮೂದಾಗಿದೆ ಅಂದರೆ ಸರಿಯಲ್ಲ. ನಿಪಿ.1 ರಲ್ಲಿ ನ್ಯಾಯಾಲಯದ ಆದೇಶದ ಬಗ್ಗೆ ಬರೆದಿರುತ್ತಾರೆ ಅಂದರೆ ಸರಿ. 2008-09 ರಲ್ಲಿ ಏನೂ ಅಂತಾ ಮುಟೇಶನ್ ಆಗಿದೆ ಎಂದು ನೆನಪಿಲ್ಲ, ದಾಖಲೆ ತೆಗೆಸಿಲ್ಲ.

**O.S. 115-15** **DW-1**

ಆಸ್ತಿ ಖರೀದಿ ಮಾಡುವ ಪೂರ್ವದಲ್ಲಿ ಪತ್ರಿಕಾ ಪ್ರಕಟಣೆ ಹೊರಡಿಸಿದ್ದು ನೆನಪಿಲ್ಲ. ಪತ್ರಿಕಾ ಪ್ರಕಟಣೆ ಹಾಕಿಸಿದ್ದು ನಿಪಿ.9 ರಲ್ಲಿ ಇಲ್ಲ ಅಂದರೆ ಸರಿ. ನಾವು ಪತ್ರಿಕಾ ಪ್ರಕಟಣೆ ಹೊರಡಿಸದ ಕಾರಣ ನಿಪಿ.9 ರಲ್ಲಿ ನಮೂದು ಇಲ್ಲ ಅಂದರೆ, ಪರಿಶೀಲನೆ ಮಾಡಬೇಕೆಂದು ಹೇಳುತ್ತಾರೆ. ಉಳಿದ ಮಾಲಿಕರಿಗೆ ಗೊತ್ತಾಗುತ್ತದೆ ಪತ್ರಿಕಾ ಪ್ರಕಟಣೆ ಹೊರಡಿಸಿಲ್ಲ ಅಂದರೆ ಸರಿಯಲ್ಲ. ಪತ್ರಿಕಾ ಪ್ರಕಟಣೆ ಹೊರಡಿಸಿದ್ದರೆ ಉಳಿದ ಮಾಲಿಕರು ತಕರಾರು ಮಾಡುತ್ತಿದ್ದರು ಅಂದರೆ ಸರಿಯಲ್ಲ. ಕೊಟ್ಟ ಚಕ್ಕುಗಳಲ್ಲಿ ಕೆಲವೊಂದು ಚೆಕ್ಕುಗಳು ಅಮಾನ್ಯಗೊಂಡಿವೆ ಅಂದರೆ ಸರಿ. ಅಮಾನ್ಯಗೊಂಡ ಚೆಕ್ಕುಗಳ ಬದಲಿ ಬೇರೆ ಚೆಕ್ಕುಗಳನ್ನು ಕೊಟ್ಟಿದ್ದೇವೆ. ಖರೀದಿ ಪತ್ರದಲ್ಲಿ ಹೊಸ ಚೆಕ್ಕುಗಳ ಬಗ್ಗೆ ನಮೂದು ಮಾಡಿದ ಬಗ್ಗೆ ನೋಡಬೇಕಾಗುತ್ತದೆ ಎಂದು ಹೇಳುತ್ತಾರೆ. ಇವತ್ತಿಗೂ ಪ್ರತಿವಾದಿ 1 ಹಾಗೂ 2 ರವರು ದಾವಾ ಆಸ್ತಿಯಲ್ಲಿ ಸ್ವಾಧೀನದಲ್ಲಿದ್ದಾರೆ ಅಂದರೆ ಸರಿಯಲ್ಲ. 2019-20 ರಲ್ಲಿ ಕರ ತುಂಬಿರುತ್ತೇವೆ. ರಶೀದಿ ತಂದು ಹಾಜರಪಡಿಸುತ್ತೇನೆ. ನಾನು ದಾವಾ ಆಸ್ತಿ ಮಾಲಿಕನಲ್ಲದ ಕಾರಣ ಕರ ತುಂಬಿಲ್ಲ ಅಂದರೆ ಸರಿಯಲ್ಲ. ಪ್ರತಿವಾದಿ 1 ಹಾಗೂ 2 ರವರಿಗೆ ಗೊತ್ತಿಲ್ಲದ ಹಾಗೆ ಸಹಿ ತೆಗೆದುಕೊಂಡಿದ್ದೇವೆ ಅಂದರೆ ಸರಿಯಲ್ಲ. ಇವತ್ತಿಗೂ ಹಣ ಕೊಟ್ಟಿಲ್ಲ ಅಂದರೆ ಸರಿಯಲ್ಲ. ಖರೀದಿ ಸಂಬಂಧ ಯಾವುದೇ ಮಾತುಕತೆಯಾಗಿಲ್ಲ ಅಂದರೆ ಸರಿಯಲ್ಲ. ಖರೀದಿ ಪೂರ್ವದಲ್ಲಿ ಋಣಭಾರ ಪ್ರಮಾಣ ಪತ್ರ ನೋಡಿದ ಬಗ್ಗೆ ನೆನಪಿಲ್ಲ. ಮುಟೇಶನ್ ಮಾಡಲು ಅರ್ಜಿ ಕೊಟ್ಟಿದ್ದೇವೆ ಯಾವಾಗ ಎಂದು ನೆನಪಿಲ್ಲ. ನ್ಯಾಯಾಲಯದ ಆದೇಶ ಇದ್ದರೂ ಸಹ ನಾನು ಆಸ್ತಿ ಖರೀದಿ ಮಾಡಿದ್ದೇವೆ ಅಂದರೆ ಸರಿಯಲ್ಲ. ಕಾನೂನು ಪ್ರಕಾರ ಖರೀದಿ ಪತ್ರಕ್ಕೆ ಮಾನ್ಯತೆ ಇಲ್ಲ ಅಂದರೆ ಸರಿಯಲ್ಲ. ಪಹಣಿ ಪತ್ರಿಕೆಯಲ್ಲಿ ನನ್ನ ಹೆಸರು ಇಲ್ಲ ಅಂದರೆ ಸರಿಯಲ್ಲ. ದಾಖಲೆ ಕೊಟ್ಟಿಲ್ಲ ಅಂದರೆ ಸರಿಯಲ್ಲ. ಆಸ್ತಿ ಮಾಲಿಕರು ಮಾರಾಟ ಮಾಡುವ ಇಚ್ಛೆ ಹೊಂದಿರಲಿಲ್ಲ ಅಂದರೆ ಸರಿಯಲ್ಲ. ಪ್ರತಿವಾದಿಗಳು ಸಣ್ಣ ಮೊತ್ತಕ್ಕೆ ಮಾರಾಟ ಮಾಡುವ ಉದ್ದೇಶ ಹೊಂದಿರಲಿಲ್ಲ ಅಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲಿ,ಗೆ ಪ್ರಕರಣವನ್ನು ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಂ ಎಫ್ ಸಿ, ಹುಬ್ಬಳ್ಳಿ.